ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	631
ಉತ್ತರಿಸಬೇಕಾದ ದಿನಾಂಕ	:	17.12.2021
ಸದಸ್ಯರ ಹೆಸರು	:	ಶ್ರೀ ಆರ್.ಬಿ.ತಿಮ್ಮಾಪೂರ, (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು	:	ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
1	ಕೊವಿಡ್-19ಕಾರಣದಿಂದಾಗಿ ಕ್ರೀಡಾಪಟುಗಳಿಗೆ ತರಬೇತಿ ಇಲ್ಲದೆ ಮನೆಯಲ್ಲಿ ಉಳಿದು ಅನುಭವಿಸುತ್ತಿರುವ ಮಾನಸಿಕ ಒತ್ತಡಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೇಯೇ: ಬಂದಿದ್ದಲ್ಲಿ ಅದರ ವಿವರಗಳೇನು	ಕೊವಿಡ್-19 ಕಾರಣದಿಂದಾಗಿ ದೈನಂದಿನ ತರಬೇತಿ ಇಲ್ಲದೆ, ಮನೆಯಲ್ಲಿ ಉಳಿದು ಕ್ರೀಡಾಪಟುಗಳು ಅನುಭವಿಸುತ್ತಿರುವ ಮಾನಸಿಕ ಒತ್ತಡಗಳ ಬಗ್ಗೆ, ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕೋವಿಡ್-19 ಸಾಂಕ್ರಾಮಿಕ ನಿಯಂತ್ರಣಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಕೈಗೊಂಡ ಕ್ರಮಗಳ ಬಗ್ಗೆ ಅರಿವು ಮೂಡಿಸಲು ಇಲಾಖೆಯು ಈ ಕೆಳಕಂಡಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ :- 1)**ನಮ್ಮ ಮನೆ, ನನ್ನ ಸುರಕ್ಷೆ**: ಅಂದಿನ ಮಾನ್ಯ ಕ್ರೀಡಾ ಸಚಿವರಾಗಿದ್ದ ಶ್ರೀ ಸಿ.ಟಿ. ರವಿ ರವರು ನಮ್ಮ ಮನೆ, ನನ್ನ ಸುರಕ್ಷೆ ಹೆಸರಿನ ಆನ್ ಲೈನ್ ಕಾರ್ಯಕ್ರಮದಲ್ಲಿ ಕ್ರೀಡಾಪಟುಗಳಾದ ಶ್ರೀ ವೆಂಕಟೇಶ್ ಪ್ರಸಾದ್, ಶ್ರೀ ಸುನೀಲ್ ಜೋಷಿ, ಶ್ರೀ ಜಿ.ಎ. ಸ್ವಾಮಿ, ಶ್ರೀಮತಿ ಅಶ್ವಿನಿ ಪೊನ್ನಪ್ಪ, ಶ್ರೀ ಜಾವಗಲ್ ಶ್ರೀನಾಥ್, ಮತ್ತು ಶ್ರೀ ಪುನಿತ್ ರಾಜ್ ಕುಮಾರ್, ಶ್ರೀ ದಿಗಂತ್, ಶ್ರೀಮತಿ ಐಂದ್ರಿತಾ ರೈ ಮತ್ತಿತರ ಜನಪ್ರಿಯ ಸಿನಿ ತಾರೆಯರೊಂದಿಗೆ ನೇರ ಆನ್ ಲೈನ್ ಸಂವಾದದಲ್ಲಿ ಪಾಲ್ಗೊಂಡಿದ್ದು ಸಾಮಾಜಿಕ ಜಾಲತಾಣಗಳಲ್ಲಿ ಈ ಕಾರ್ಯಕ್ರಮವನ್ನು ನೇರ ಪ್ರಸಾರ ಮಾಡಲಾಗಿರುತ್ತದೆ. ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಗಳು ಮತ್ತು ಸ್ವಯಂಸೇವಕರಿಗೆ ಕೋವಿಡ್-19 ಎದುರಿಸುವ ಬಗ್ಗೆ ತರಬೇತುದಾರರ ತರಬೇತಿ ಕಾರ್ಯಕ್ರಮವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಆಯೋಜಿಸಲಾಗಿದೆ. ನಿಮ್ಹಾನ್ಸ್ ಸಂಸ್ಥೆಯ ಸಹಯೋಗದೊಂದಿಗೆ 'ರಾಷ್ಟ್ರೀಯ ಸೇವಾ ಯೋಜನೆ' ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮದಲ್ಲಿ 2500 ಅಧ್ಯಾಪಕರಿಗೆ ಒತ್ತಡ ನಿರ್ವಹಣೆಯ ಬಗ್ಗೆ ಯುವಜನರಿಗೆ ಮಾರ್ಗದರ್ಶನ ನೀಡಲು ತರಬೇತಿ ನೀಡಲಾಗಿದೆ.

		ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಜಂಟಿಯಾಗಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಎನ್.ಎಸ್.ಎಸ್. ಸಮನ್ವಯಾಧಿಕಾರಿಗಳು ಮತ್ತು ಸ್ವಯಂ ಸೇವಕರೊಂದಿಗೆ ಕೋವಿಡ್-19 ಬಗ್ಗೆ 'ಜಾಗೃತಿ' ಮತ್ತು 'ಈ ಸಂದರ್ಭದಲ್ಲಿ ಒತ್ತಡ ನಿರ್ವಹಣೆಯ ಬಗ್ಗೆ ಆನ್ ಲೈನ್ ಕಾರ್ಯಕ್ರಮ' ನಡೆಸಲಾಗಿರುತ್ತದೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ ಜಂಟಿಯಾಗಿ ಯೂನಿಸೆಫ್ ಸಹಯೋಗದಲ್ಲಿ 'ಆನ್ ಲೈನ್' ನಲ್ಲಿ ಕೋವಿಡ್-19ರ ಬಗ್ಗೆ ಎನ್.ಎಸ್.ಎಸ್. ಸಮನ್ವಯಾದಿಕಾರಿ ಮತ್ತು ಸ್ವಯಂಸೇವಕರಿಗೆ ಜಾಗೃತಿ ಕಾರ್ಯಕ್ರಮ ಮತ್ತು ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ. ಇದರಲ್ಲಿ 3600 ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿಗಳು ತರಬೇತಿ ಪಡೆದು 2.00 ಲಕ್ಷ ಸ್ವಯಂ ಸೇವಕರಿಗೆ ತರಬೇತಿ ನೀಡಲಾಗಿದೆ. ಕ್ರೀಡಾಪಟುಗಳಿಗೆ ಇಲಾಖೆಯಿಂದ ಆನ್ ಲೈನ್ ಮುಖಾಂತರ ಕ್ರೀಡಾ ತರಬೇತಿಯನ್ನು ನೀಡಲಾಗಿದೆ.
2	ಸಂಕಷ್ಟದಲ್ಲಿರುವ ಕ್ರೀಡಾಪಟುಗಳಿಗೆ ಆರ್ಥಿಕ ನೆರವು ಒದಗಿಸಲು ಸರ್ಕಾರ ಮುಂದಾಗುವುದೇ?	1) ಕೋವಿಡ್-19ರ ಪೀಡಿತ ಅರ್ಜುನ ಪ್ರಶಸ್ತಿ ವಿಜೇತ ದಿವಗಂತ ಶ್ರೀ ರಮೇಶ್ ಟೀಕಾರಾಂ ಇವರಿಗೆ ವೈದ್ಯಕೀಯ ವೆಚ್ಚವನ್ನು ಭರಿಸಲು ರೂ 1.00 ಲಕ್ಷ ತುರ್ತು ಸಹಾಯಧನ ನೀಡಲಾಗಿದೆ. 2) ಕೋವಿಡ್-19ರ ಲಾಕ್ ಡೌನ್ ನಿಂದ ಕಷ್ಟಪರಿಸ್ಥಿತಿಯಲ್ಲಿದ್ದ ವಿಶೇಷಚೇತನ ಕ್ರೀಡಾಪಟು ಶ್ರೀ ಜಯದೀಬನ್ ರಾಮಮೂರ್ತಿ ಇವರಿಗೆ ರೂ.25,000/- ಚೆಕ್ ನೀಡಿ ಸಹಾಯಹಸ್ತ ನೀಡಲಾಗಿದೆ. 3) ಅಲ್ಲದೇ, ರಾಜ್ಯಮಟ್ಟ, ರಾಷ್ಟ್ರಮಟ್ಟ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕುಸ್ತಿ ಕ್ರೀಡಾಪಟುಗಳಿಗೆ ಅನುಕ್ರಮವಾಗಿ ರೂ.2500/-, ರೂ.3000/- ಮತ್ತು ರೂ.4000/- ಗಳ ಮಾಸಾಶನವನ್ನು ನೀಡಲಾಗುತ್ತಿದೆ. ಹಾಗೆಯೇ, ರಾಜ್ಯಮಟ್ಟ, ರಾಷ್ಟ್ರಮಟ್ಟ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕುಸ್ತಿಯೇತರ ಕ್ರೀಡಾಪಟುಗಳಿಗೆ ಅನುಕ್ರಮವಾಗಿ ರೂ.1000/-, ರೂ.1500/- ಮತ್ತು ರೂ.2000/- ಗಳ ಮಾಸಾಶನವನ್ನು ನೀಡಲಾಗುತ್ತಿದೆ.

ವೈಎಸ್‌ಡಿ/ಇಬಿಬಿ/199/2021

(ಡಾ|| ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು.